# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1614** |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-12-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರೈತರು ಬೆಳೆದಿರುವ ಬೆಳೆಗಳ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ರೈತರು ತಮ್ಮ ಬೆಳೆಗಳಿಗೆ ಬಿಮಾ ಯೋಜನೆ ಪಡೆದಿದ್ದಾರೆ; (ವರ್ಷವಾರು ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ (KRS-PMFBY) ಕಳೆದ ಮೂರು ವರ್ಷಗಳಲ್ಲಿ, ಅಂದರೆ, 2022-23ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಒಟ್ಟು 43.00 ಲಕ್ಷ ಅರ್ಹ ರೈತ ಫಲಾನುಭವಿಗಳಿಗೆ ರೂ.553498.32 ಲಕ್ಷಗಳ ಬೆಳೆ ವಿಮಾ ಪರಿಹಾರ ಮೊತ್ತವು ಮಂಜೂರಾಗಿರುತ್ತದೆ.<br><br>ವರ್ಷಾವಾರು ಮಂಜೂರಾಗಿರುವ ಬೆಳೆ ವಿಮೆ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಅರ್ಹ ರೈತ ಫಲಾನುಭವಿ ಪ್ರಕರಣಗಳ ಸಂಖ್ಯೆ (ಲಕ್ಷಗಳಲ್ಲಿ)</th><th>ಮಂಜೂರಾದ ಬೆಳೆ ವಿಮೆ ಪರಿಹಾರ ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>2022-23</td><td>12.49</td><td>136406.10</td></tr>
<tr><td>2023-24</td><td>18.95</td><td>211851.01</td></tr>
<tr><td>2024-25</td><td>11.55</td><td>205241.21</td></tr>
<tr><td>ಒಟ್ಟು</td><td>43.00</td><td>553498.32</td></tr>
</table>
ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಕೃಷಿ ಕ್ಷೇತ್ರದಲ್ಲಿ ಮಾಹಿತಿ ತರಬೇತಿ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳ (Distance Education Programmes) ಮೂಲಕ ರೈತರ ಶಕ್ತೀಕರಣ ರೈತನ ಆದಾಯದಲ್ಲಿ ವೃದ್ಧಿಗೆ ಸರ್ಕಾರ ಕೈಗೊಂಡಿರುವ ಹೊಸ ಯೋಜನೆಗಳು ಯಾವುವು;</td><td>ರಾಜ್ಯ ಕೃಷಿ ಇಲಾಖೆಯಲ್ಲಿ 23 ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ರೈತರು, ರೈತಮಹಿಳೆಯರು ಹಾಗೂ ಇಲಾಖೆಯ ವಿಸ್ತರಣಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ರಾಜ್ಯದ ರೈತರು /ರೈತಮಹಿಳೆಯರಿಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ನವೀನ ಮಾದರಿಯ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡುವುದರ ಮೂಲಕ ಬೇಸಾಯದ ಖರ್ಚು ಕಡಿಮೆ ಮಾಡಿ ಉತ್ಪಾದಕತೆಯನ್ನು ಹೆಚ್ಚಿಸಿ ರೈತರ ಆದಾಯವನ್ನು ಹೆಚ್ಚಿಸುವುದು ಈ ತರಬೇತಿ ಕಾರ್ಯಕ್ರಮಗಳ ಪ್ರಮುಖ ಧ್ಯೇಯವಾಗಿದೆ.</td></tr>
</table>

| | | |
|---|---|---|
| | | ರಾಜ್ಯವಲಯ ಯೋಜನೆಯಡಿ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ಒಂದು ದಿನ/ಮೂರು ದಿನ/ ಆರು ದಿನಗಳ ವಿಶೇಷ ತರಬೇತಿ, ಹೊರಾಂಗಣ ತರಬೇತಿ ಹಾಗೂ ಆನ್‌ಲೈನ್ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. ಕೃಷಿ ಸಂಶೋಧನಾ ಕೇಂದ್ರಗಳು, ಉತ್ತಮ ಕೃಷಿ ಕ್ಷೇತ್ರಗಳು, ಕೃಷಿ ಪ್ರಶಸ್ತಿ/ ಕೃಷಿ ಪಂಡಿತ ಪ್ರಶಸ್ತಿ/ ಪ್ರಗತಿಪರ ಕೃಷಿಕರ ಕ್ಷೇತ್ರಗಳು ಮತ್ತು ಯಶಸ್ವಿ ಉದ್ದಿಮೆ/ ಕ್ರಿಯಾತ್ಮಕ ಗುಂಪುಗಳು ಇತ್ಯಾದಿ ಸ್ಥಳಗಳಿಗೆ ನಾಲ್ಕು ದಿನಗಳ ಅಧ್ಯಯನ ಪ್ರವಾಸವನ್ನೂ ಸಹ ಆಯೋಜಿಸಲಾಗುತ್ತಿದೆ.<br><br>ರೈತರು/ರೈತ ಮಹಿಳೆಯರಿಗೆ ಅನುಕೂಲವಾಗುವಂತೆ, ಇಲಾಖೆಯ ವಿವಿಧ ಯೋಜನೆಗಳಡಿ ಲಭ್ಯವಿರುವ ಅನುದಾನವನ್ನು ಒಗ್ಗೂಡಿಸಿಕೊಂಡು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ವರ್ಷ ಪೂರ್ತಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.<br><br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ರೈತರು ಮತ್ತು ರೈತ ಮಹಿಳೆಯರು ಸೇರಿದಂತೆ ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿಗಳನ್ನು ಆಯೋಜಿಸಲಾಗುತ್ತಿದ್ದು, ಇದರಿಂದ ಕೃಷಿ ಮತ್ತು ಕೃಷಿಯೇತರ ಕಾರ್ಯಾಚರಣೆಗಳನ್ನು ನಿರ್ವಹಿಸಲು ನುರಿತ ಮಾನವಶಕ್ತಿಯ ಗುಂಪನ್ನು ರಚಿಸಲು ಸಹಾಯ ಮಾಡಿದಂತಾಗುತ್ತಿದೆ.<br><br>ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯ (ಸೂಕ್ಷ್ಮ ನೀರಾವರಿ) ಯೋಜನೆಯಡಿ ಖಚಿತ ನೀರಾವರಿ ಅಡಿಯಲ್ಲಿ ಕೃಷಿ ಪ್ರದೇಶವನ್ನು ವಿಸ್ತರಿಸುವುದು, ನೀರಿನ ವ್ಯರ್ಥವನ್ನು ಕಡಿಮೆ ಮಾಡಲು ಜಮೀನಿನಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಸುಧಾರಿಸುವುದು, ನಿಖರ ನೀರಾವರಿ ಮತ್ತು ಇತರ ನೀರು ಉಳಿಸುವ ತಂತ್ರಜ್ಞಾನಗಳ ಅಳವಡಿಕೆಯನ್ನು ಹೆಚ್ಚಿಸುವ (ಪ್ರತಿ ಹನಿಗೆ ಹೆಚ್ಚಿನ ಬೆಳೆ) ತಾಂತ್ರಿಕತೆಗಳ ಬಗ್ಗೆ ತರಬೇತಿಗಳನ್ನು ನೀಡಲಾಗುತ್ತಿದೆ.<br><br>ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO) ಮತ್ತು ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿ ಸುಧಾರಿತ ಬೇಸಾಯ ಕ್ರಮಗಳ ಕುರಿತ ತರಬೇತಿ, ಬೆಳೆ ಪದ್ಧತಿ ಆಧಾರಿತ ತರಬೇತಿ, ಸಂಸ್ಕರಣೆ, ಮೌಲ್ಯ ಸರಪಳಿ ಮತ್ತು ಉತ್ತಮ ಮಾರುಕಟ್ಟೆ ಕಲ್ಪಿಸುವ ಕುರಿತು ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. |

| | | |
|---|---|---|
| | | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್) ಮತ್ತು ಬ್ಯೂರೋ ಆಫ್ ಎನರ್ಜಿ ಎಫಿಷಿಎನ್ಸಿ (ಬಿ.ಇ.ಇ) ಇವರ ಸಹಯೋಗದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಿಗೆ ರೈತರು ಮತ್ತು ಕೃಷಿ ಪಂಪು/ ಉಪಕರಣಗಳ ತಂತ್ರಜ್ಞರಿಗೆ ಬಿಇಇ ಸ್ಟಾರ್ ಲೇಬಲ್ ವುಳ್ಳ ಇಂಧನ ದಕ್ಷ ಪಂಪ್ ಸೆಟ್ ಬಳಕೆ, ದುರಸ್ತಿ ಮತ್ತು ನೀರಿನ ಸಂರಕ್ಷಣೆ ಕುರಿತು ಒಂದು ದಿನದ ತರಬೇತಿ ಮತ್ತು ಜಾಗೃತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.<br><br>ಕೆಪೆಕ್ ಸಂಸ್ಥೆಯ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿ ಫಲಾನುಭವಿಗಳಿಗೆ ಕಿರು ಆಹಾರ ಸಂಸ್ಕರಣಾ ಘಟಕಗಳ (ಹೊಸದು/ ಉನ್ನತೀಕರಣ) ಉನ್ನತೀಕರಣಗೊಳಿಸುವ ಸಲುವಾಗಿ ಉದ್ಯಮಶೀಲತಾ ಅಭಿವೃದ್ಧಿ, ಉದ್ಯಮ ಕಾರ್ಯಾಚರಣೆಗಳ ಅಗತ್ಯ ಕಾರ್ಯಗಳು, ಮಾರ್ಕೆಟಿಂಗ್, ಲೆಕ್ಕಪತ್ರ ನಿರ್ವಹಣೆ, ನೋಂದಣಿ, FSSAI ಮಾನದಂಡಗಳು, ಉದ್ಯೋಗ ಆಧಾರ್, GST ನೋಂದಣಿ, ಸಾಮಾನ್ಯ ನೈರ್ಮಲ್ಯ, ಇತ್ಯಾದಿ ಕುರಿತು ತರಬೇತಿ ನೀಡಲಾಗುತ್ತಿದೆ. |
| ಇ) | ರೈತರ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸುಗಮತೆ, ಸಾಲ ಸೌಲಭ್ಯ ಮತ್ತು ಕೃಷಿ ಮಾರುಕಟ್ಟೆ ಸಂಪರ್ಕದ ಕುರಿತು ಸರ್ಕಾರದ ಯೋಜನೆಗಳು ಯಾವುವು; | ರೈತರು ಬೆಳೆದ ತಮ್ಮ ಕೃಷಿ ಉತ್ಪನ್ನಗಳನ್ನು ಅಧಿಸೂಚಿತ ಮಾರುಕಟ್ಟೆ ಪ್ರಾಂಗಣಗಳಲ್ಲಿ/ ನೇರ ಖರೀದಿ ಕೇಂದ್ರ/ ಖಾಸಗಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟ ಮಾಡುವುದು ಕಡ್ಡಾಯವಿರುತ್ತದೆ.<br><br>ಮಾರುಕಟ್ಟೆ ಸಮಿತಿಗಳು ಮಾರಾಟಕ್ಕಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಮಾರುಕಟ್ಟೆ ಪ್ರಾಂಗಣಗಳಲ್ಲಿ ಒದಗಿಸಿ ಮಾರಾಟದಲ್ಲಿ ಸ್ಪರ್ಧಾತ್ಮಕತೆ ತರಲು ಟೆಂಡರ್ ಪ್ರಕ್ರಿಯೆಗೆ ಅವಕಾಶ ಕಲ್ಪಿಸಿದೆ.<br><br>ಸರ್ಕಾರವು ಸ್ಥಾಪಿಸಿದ ಏಕೀಕೃತ ಮಾರುಕಟ್ಟೆ ವೇದಿಕೆ (ರೆಮ್ಸ್ ಸಂಸ್ಥೆ) ಮೂಲಕ ಆನ್‌ಲೈನ್ ಮೂಲಕ ಮಾರಾಟ ಹಾಗೂ ಖರೀದಿ ವ್ಯವಹಾರ ಕೈಗೊಳ್ಳಲು ವ್ಯವಸ್ಥೆಗೊಳಿಸಲಾಗಿದೆ. ಖರೀದಿದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆನ್‌ಲೈನ್ ಮೂಲಕ ತಮ್ಮ ಧಾರಣೆ ನಮೂದು ಮಾಡಲು ಮತ್ತು ಟೆಂಡರ್ ಡಿಕ್ಲರೇಷನ್ ನಂತರದಲ್ಲಿ ಮಾರಾಟ ಮೌಲ್ಯವನ್ನು ರೈತರಿಗೆ ನಗದು ಅಥವಾ ಚೆಕ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಪಾವತಿ ಮಾಡಲು ವ್ಯವಸ್ಥೆ ಮಾಡಲಾಗಿದೆ. |

| | | |
|---|---|---|
| | | ಖರೀದಿದಾರರು ನೇರವಾಗಿ ರೈತರಿಂದ ಉತ್ಪನ್ನ ಖರೀದಿ ಮಾಡಿದಲ್ಲಿ ಹಣ ಪಾವತಿ ನಂತರದಲ್ಲಿಯೇ ಪರ್ಮಿಟ್ ಪಡೆಯಲು ಅವಕಾಶ ಮಾಡಲಾಗಿದೆ.<br><br>ಮಾರುಕಟ್ಟೆ ಪ್ರಾಂಗಣಗಳಲ್ಲಿ ರಾಷ್ಟ್ರೀಕೃತ / ಡಿ.ಸಿ.ಸಿ ಬ್ಯಾಂಕ್‌ಗಳ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸಿದೆ. ಎಟಿಎಂ ಸೌಲಭ್ಯವನ್ನು ಸದರಿ ಬ್ಯಾಂಕ್‌ಗಳು ಒದಗಿಸುತ್ತವೆ.<br><br>ರಾಜ್ಯದ ಮಾರುಕಟ್ಟೆಗಳಲ್ಲಿ ಪ್ರಚಲಿತವಿರುವ ಆವಕ, ಧಾರಣೆಗಳ ಮಾಹಿತಿ ಲಭ್ಯವಾಗುವಂತೆ ಕೃಷಿ ಮಾರಾಟ ವಾಹಿನಿ ವೆಬ್‌ಸೈಟ್ ರೂಪಿಸಲಾಗಿದೆ. ಎಸ್.ಎಂ.ಎಸ್ ಮೂಲಕ ರೈತರಿಗೆ ಉತ್ಪನ್ನಗಳ ಧಾರಣೆ ಮಾಹಿತಿ ನೀಡಲು ವ್ಯವಸ್ಥೆ ಇದೆ.<br><br>ರಾಜ್ಯದ ಎಲ್ಲಾ ಪ್ರದೇಶಗಳನ್ನು ಒಳಗೊಂಡಂತೆ ಮುಖ್ಯ ಮಾರುಕಟ್ಟೆ, ಉಪ ಮಾರುಕಟ್ಟೆ, ಮಾರುಕಟ್ಟೆ ಉಪ ಪ್ರಾಂಗಣ ಹೊಂದಿದ್ದು, ರೈತರಿಗೆ ಹತ್ತಿರದಲ್ಲಿಯೇ ಮಾರುಕಟ್ಟೆ ಸೌಲಭ್ಯ ಒದಗಿಸಲಾಗಿದೆ.<br><br>ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯವು ಮಾರುಕಟ್ಟೆಗಳ ಸಂಪೂರ್ಣ network ಹೊಂದಿರುವ ಪ್ರಮುಖ ರಾಜ್ಯವಾಗಿದೆ. |
| ಈ) | ರಾಜ್ಯದಲ್ಲಿ ಕೃಷಿ ಜೀವವೈವಿಧ್ಯವನ್ನು ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | 2024-25ರ ಆಯವ್ಯಯ ಭಾಷಣದಲ್ಲಿ, ದೇಸಿ ತಳಿಗಳ ಸಂರಕ್ಷಣೆ ಮತ್ತು ಉತ್ತೇಜನ ಕಾರ್ಯಕ್ರಮವನ್ನು ಘೋಷಿಸುವ ಮೂಲಕ, ಕಣ್ಮರೆಯಾಗುತ್ತಿರುವ ಮತ್ತು ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳ ಗುರುತಿಸುವಿಕೆ, ಸಂರಕ್ಷಣೆ, ಅಭಿವೃದ್ಧಿ, ಪ್ರಚಾರ ಹಾಗೂ ರೈತರಿಗೆ ಉತ್ತೇಜನ ನೀಡಲಾಗುತ್ತಿದೆ.<br><br>ಸದರಿ ಕಾರ್ಯಕ್ರಮವು ದೇಸಿ ತಳಿಗಳ ಸಂರಕ್ಷಣೆ ಮತ್ತು ಕೃಷಿ ಮಾಡುತ್ತಿರುವ ರೈತರಿಗೆ ಬೆಂಬಲ/ಪ್ರೋತ್ಸಾಹಧನ, ಉತ್ಪಾದನೆ ಮತ್ತು ಪ್ರಮಾಣೀಕರಣ ಪ್ರೋತ್ಸಾಹಧನ, ಮೂಲ ಸಮೀಕ್ಷೆ ಕೈಗೊಳ್ಳಲು ರಾಜ್ಯ ಹಾಗೂ ಜಿಲ್ಲಾಮಟ್ಟಗಳಲ್ಲಿ ಕಾರ್ಯಾಗಾರಗಳ ಆಯೋಜನೆ, ದೇಸಿ ತಳಿಗಳ ಪ್ರಾಯೋಗಿಕ ಪ್ರಯೋಗಗಳು, ಸಾಮಾರ್ಥ್ಯಾಭಿವೃದ್ಧಿ, ದೇಸಿ ತಳಿಗಳ ಬೀಜ ಬ್ಯಾಂಕ್ ಸ್ಥಾಪನೆ, ದೇಸಿ ತಳಿಗಳ ಪೌಷ್ಠಿಕಾಂಶದ ಬಗ್ಗೆ ಅರಿವು, ಮಾರುಕಟ್ಟೆ ಬೆಂಬಲ, ದೇಸಿ ತಳಿಗಳ ಬಗ್ಗೆ ಪ್ರಚಾರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಮುಂತಾದ ಘಟಕಗಳನ್ನು ಒಳಗೊಂಡಿರುತ್ತದೆ. |

| | | |
|---|---|---|
| | | ಮುಂದುವರೆದು, ಮೊಬೈಲ್ ಆಪ್ ಮೂಲಕ ರೈತರ ದತ್ತಾಂಶ (ಬೆಳೆ, ದೇಸಿ ತಳಿ, ವಿಶಿಷ್ಠ ಗುಣಲಕ್ಷಣಗಳು, ಕೃಷಿ ಪದ್ಧತಿಗಳು, ಪ್ರಶಸ್ತಿ ಮುಂತಾದವುಗಳು) ವನ್ನು ಸಂಗ್ರಹಿಸಲಾಗುತ್ತಿದೆ. ಜೀವ ವೈವಿಧ್ಯತೆ ಕಾಪಾಡಲು ಇಲ್ಲಿಯವರೆಗೆ ಸುಮಾರು 600 ರೈತರಿಂದ 20 ಕೃಷಿ ಬೆಳೆಗಳಿಗೆ ಸಂಬಂಧಿಸಿದಂತೆ ಸುಮಾರು 2300 ದೇಸಿ ತಳಿ ಬೀಜಗಳನ್ನು ಸಂಗ್ರಹಿಸಿ ಕೃಷಿ ವಿಶ್ವವಿದ್ಯಾನಿಲಯ, ಜೆಕೆವಿಕೆ, ಬೆಂಗಳೂರು ಇಲ್ಲಿಯ ಬೀಜ ಬ್ಯಾಂಕ್‌ನಲ್ಲಿ ಸಂರಕ್ಷಿಸಲಾಗಿರುತ್ತದೆ. ಹಾಗೆಯೇ, ಸದರಿ ದೇಸಿ ತಳಿಗಳ ಶುದ್ಧತೆ ಕುರಿತು ಅಧ್ಯಯನ ಪ್ರಯೋಗಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ಕೈಗೊಳ್ಳಲಾಗುತ್ತಿದೆ. |

*ಕೃ ಇ 240 ಎಎಂಎಸ್ 2025*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು